Ref.No. 220–18

WW–1,

ದಿನಾಂಕಃ 16–10–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ–2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದ ಃ

COD Demand No. 11 ರಲ್ಲಿ 2 ನೇ ಪಾರ್ಟಿಯವರು ಲೋನ್ ಕೊಡಬೇಕು ಎಂದು ಕೇಳಿಕೊಂಡಿರುವುದು 2 ನೇ ಪಾರ್ಟಿ ಮತ್ತು ಕೆಲಸಗಾರರರ ಆರ್ಥಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡು ಮಾಡಲಾಗಿದೆ. ಸದರಿ ಬೇಡಿಕೆಯ ಬಗ್ಗೆ ಯಾವುದೇ ವರ್ಕ್ ಶೀಟ್ ನ್ನು ತಯಾರಿಸಲಾಗಿರುವುದಿಲ್ಲ , ಕೆಲಸಗಾರರ ಬೇಡಿಕೆಯ ಮೇರೆಗೆ ಅದನ್ನು COD ಯಲ್ಲಿ ನಮೂದಿಸಲಾಗಿರುತ್ತದೆ. ಮನೆ ಕಟ್ಟಲು ಲೋನ್ ಕೇಳಿದಾಗ ನಿವೇಶನದ ಅವಶ್ಯಕತೆ ಇರುತ್ತದೆ ಎಂದರೆ ಸರಿ . ಎಷ್ಟು ಕೆಲಸಗಾರರ ಬಳಿ ನಿವೇಶನ ಇದೆ ಎಂಬುದರ ಬಗ್ಗೆ ನಾವು COD ಯನ್ನು ತಯಾರಿಸುವ ಕಾಲಕ್ಕೆ General Body Meeting ನಲ್ಲಿ ಕೇಳಿರುತ್ತೇವೆ ಆದರೆ ಪಟ್ಟಿಯನ್ನು ಮಾಡಿರುವುದಿಲ್ಲ. ಯೂನಿಯನ್ ನ 350 ಜನ ಸದಸ್ಯರಲ್ಲಿ ಸುಮಾರು 200 ಜನ ಸದಸ್ಯರ ಬಳಿ ನಿವೇಶನವಿರುತ್ತದೆ. ಸದರಿ 200 ಜನ ಸದಸ್ಯ ರ ನಿವೇಶನದ ದಾಖಲಾತಿಗಳು ಅವರ ವೈಯುಕ್ತಿಕ ದಾಖಲಾತಿಗಳಾಗಿರುವುದರಿಂದ ಅವನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ಆಗುವುದಿಲ್ಲ. ನಾನು ಹೇಳಿದಂತೆ 200 ಜನ ಸದಸ್ಯ ರ ಬಳಿ ನಿವೇಶನ ಇರದೇ ಇದ್ದುದರಿಂದ ಅವರಿಗೆ ಲೋನ್ ನ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ . Vehicle loan ಅನ್ನು ಕೇಳಬೇಕಾದರೆ ಯಾವ ಕಂಪನಿಯ ವಾಹನ ಕ್ಕೆ ಲೋನ್ ನ್ನು ಕೇಳಲಾಗುತ್ತಿದೆ ಎಂದು COD ಯಲ್ಲಿ ನಮೂದಿಸಲಾಗಿರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ . Vehicle loan 60000 ರೂಪಾಯಿಗಳನ್ನು ಕೇಳಿದ್ದು ವಾಹನದ ಬೆಲೆ ಅದಕ್ಕಿಂತ ಕಮ್ಮಿ ಅಥವಾ ಹೆಚ್ಚು ಕೂಡ ಇರಬಹುದು ಎಂದರೆ ಸರಿ . Higher education loan ನ್ನು ಕೇಳಿದ್ದು ಯೂನಿಯನ್ ನ ಎಷ್ಟು ಜನ ಕೆಲಸಗಾರರ ಮಕ್ಕಳುಗಳು Higher education ಮಾಡುತ್ತಿದ್ದಾರೆ ಎಂದು ನಮೂದಿಸಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಆ ಬಗ್ಗೆ ದಾಖಲಾತಿಗಳು ಇದ್ದು ಅದನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ ಎಂದು ನುಡಿಯುತ್ತಾರೆ . ಕೆಲಸಗಾರರ ರು ಹಣದ ಲೇವಾದೇವಿ ವ್ಯವಹಾರನ್ನು ಮಾಡುತ್ತಾರೆ ಎಂದರೆ ಸರಿಯಲ್ಲ . ಆಡಳಿತ ವರ್ಗದವರಿಂದ ಲೋನ್ ಎಂಬ ಹೆಸರಿನಲ್ಲಿ ಹಣವನ್ನು ಪಡೆದು ಅದನು ಲೇವಾದೇವಿ ವ್ಯವಹಾರಕ್ಕೆ ಬಳಸಬೇಕೆಂಬ ಉದ್ದೇಶ ನಮ್ಮದಾಗಿರುತ್ತದೆ ಎಂದರೆ ಸರಿಯಲ್ಲ . ನಾನು ಕೆಲಸಕ್ಕೆ ಸೇರುವ ಕಾಲಕ್ಕೆ ನನ್ನ ನೇಮಕಾತಿ ಆದೇಶದಲ್ಲಿ ಮತ್ತು Standing order ನಲ್ಲಿ ನಿವೃತ್ತಿ ವಯಸ್ಸು 58 ವರ್ಷ ಎಂದು ಇರುತ್ತದೆ ಎಂದರೆ ಸರಿ . COD ಯಲ್ಲಿ ನಿವೃತ್ತಿ ವಯಸ್ಸನ್ನು 60 ವರ್ಷ ಮಾಡಬೇಕೆಂದು ಕೇಳಿಕೊಂಡಿರುತ್ತೇವೆ ಎಂದರೆ ಸರಿ .

ಕರ್ನಾಟಕ ಸರ್ಕಾರವು ನಿವೃತ್ತಿ ವಯಸ್ಸನ್ನು 60 ವರ್ಷಕ್ಕೆ ಏರಿಸಿದ್ದರಿಂದ COD ಯಲ್ಲಿ ಸದರಿ ಬೇಡಿಕೆಯನ್ನು ಮಾಡಲಾಗಿರುತ್ತದೆ. ಸದರಿ ವಿಚಾರವನ್ನು COD ಯಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ . Promotion Policy ನ್ನು COD ಯಲ್ಲಿ ಕೇಳಲಾಗಿರುತ್ತದೆ ಎಂದರೆ ಸರಿ . ಸದರಿ ಬೇಡಿಕೆಯನ್ನು ಆಡಳಿತ ವರ್ಗದವರು ಸಂಧಾನಕ್ಕೆ ಬಂದಾಗ ಒಡಂಬಡಿಕೆ ಮಾಡಿಕೊಳ್ಳುವ ಉದ್ದೇಶದಿಂದ ಕೇಳಿರುತ್ತೇವೆ. COD Demand No. 14 ರಲ್ಲಿ ಕಾಂಟ್ರಾಕ್ಟ್ ವರ್ಕರ್ಸ್ ಗಳನ್ನು ಖಾಯಂ ನೌಕರರಾಗಿ ಪರಿಗಣಿಸಬೇಕು ಎಂದು ಕೇಳಿರುತ್ತೇವೆ ಎಂದರೆ ಸರಿ . ಸದರಿ ಕಾಂಟ್ರಾಕ್ಟ್ ವರ್ಕರ್ಸ್ ಗಳಿಗೆ 2 ನೇ ಪಾರ್ಟಿ ಸಂಸ್ಥೆ ಯೇ ಸಂಬಳವನ್ನು ನೀಡುತ್ತಿರುತ್ತದೆ. ಸದರಿ ಕಾಂಟ್ರಾಕ್ಟ್ ವರ್ಕರ್ಸ್ ಗಳ ಪಟ್ಟಿಯನ್ನು ನಾನು ಈ ನ್ಯಾಯಾಧೀಕರಣ ದ ಮುಂದೆ ಸಲ್ಲಿಸಿರುವುದಿಲ್ಲ. ಆದುದರಿಂದ COD Demand No. 14 ರ ಬಗ್ಗೆ ಯಾವುದೇ ಕ್ಲಾರಿಟಿ ಇರುವುದಿಲ್ಲ ಎಂದರೆ ಸರಿಯಲ್ಲ . COD Demand No. 15 ರಲ್ಲಿ ಕೇಳಿದಂತಹ Festival advance ಗೆ ಯಾವುದೇ ರೀತಿಯ ಆಧಾರ ಇರುವುದಿಲ್ಲ ಎಂದರೆ ಸರಿಯಲ್ಲ . Festival advance ಪ್ರತಿಯೊಬ್ಬ ಕೆಲಸಗಾರರ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ನೀಡಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ . 2 ನೇ ಪಾರ್ಟಿ ಸಂಸ್ಥೆ ಕೂರ್ಗಳ್ಳಿ ಕೈಗಾರಿಕಾ ವಲಯದಲ್ಲಿದ್ದು ಕೆಲಸಗಾರರರು ಹಾಸನ, ಕೆ ಆರ್ ನಗರ ಮತ್ತು ಮೈಸೂರಿನ ಸುತ್ತಮುತ್ತಿನ ಪ್ರದೇಶಗಳಿಂದ ಬರುತ್ತಾರೆ . ಬಹುತೇಕ ಕೆಲಸಗಾರರ ಬಳಿ ಸ್ವಂತ ವಾಹನ ಇರುವುದಿಲ್ಲ. COD Demand No. 16 ರಲ್ಲಿ ಕೇಳಿದಂತಹ Transport facility ಯನ್ನು ಯಾವ ಆಧಾರದ ಮೇಲೆ ಕೇಳಲಾಗಿರುತ್ತದೆ ಎಂದು ಅದರಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು ಕೆಲಸಗಾರರು ದೂರದ ಪ್ರದೇಶಗಳಿಂದ ಬರುವುದರಿಂದ ಸದರಿ ಬೇಡಿಕೆಯನ್ನು ಇಡಲಾಗಿದೆ ಎಂದು ನುಡಿಯುತ್ತಾರೆ . ಸದರಿ ವ್ಯವಸ್ಥೆಯನ್ನು ಮಾಡಲು ಆಡಳಿತ ವರ್ಗದವರಿಗೆ ತುಂಬಾ ಹಣ ವೆಚ್ಚವಾಗುತ್ತದೆ ಎಂದರೆ ಇರಬಹುದು. COD Demand No. 17 ರಲ್ಲಿ Confirmation of trainees and probationers ಬಗ್ಗೆ ಕೇಳಿರುತ್ತೇವೆ ಎಂದರೆ ಸರಿ . ನೇಮಕಾತಿ ಪತ್ರದಲ್ಲಿ ಪ್ರತಿಯೊಬ್ಬ ಕೆಲಸಗಾರರನ confirmation ಯಾವಾಗ ಆಗುತ್ತದೆ ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ಕೆಲಸಗಾರರ confirmation ಮಾಡುವುದು ಅವರ ಕೆಲಸದ ಕಾರ್ಯ ನಿರ್ವಹಣೆಯ ಮೇಲೆ ಆಡಳಿತ ವರ್ಗದವರಿಗೆ ಬಿಟ್ಟ ವಿಚಾರವಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ . COD Demand No. 18 ರಲ್ಲಿ ಯೂನಿಫಾರಂ ಗಳನ್ನು ನೀಡುವಂತೆ ಕೇಳಲಾಗಿರುತ್ತದೆ ಎಂದರೆ ಸರಿ . ಆಡಳಿತ ವರ್ಗದವರ ತಮ್ಮ ಆರ್ಥಿಕ ಸ್ಥಿತಿಯನ್ನು ಪರಿಗಣಿಸಿ ಯೂನಿಫಾರಂ ಗಳನ್ನು ನೀಡುತ್ತಾರೆ ಅದನ್ನು ಬೇಡಿಕೆಯ ರೂಪದಲ್ಲಿ ಇಡುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿಯಲ್ಲ . COD Demand No. 19 ರಲ್ಲಿ Canteen ವ್ಯವಸ್ದೆಯನ್ನು ಕೇಳಿರುತ್ತೇವೆ ಎಂದರೆ ಸರಿ . ಆದರೆ 2 ನೇ ಪಾರ್ಟಿ ಸಂಸ್ಥೆಯವರು ಕಾರ್ಖಾನೆ ಕಾಯಿದೆಗೆ ಅನುಗುಣವಾಗಿ ಈಗಾಗಲೇ ಕ್ಯಾಂಟೀನ್ ವ್ಯವಸ್ಥೆಯನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ .

ಕಾರ್ಖಾನೆ ಕಾಯಿದೆ ಅಡಿಯಲ್ಲಿ ಕ್ಯಾಂಟೀನ್ ವ್ಯವಸ್ಥೆಯನ್ನು ಮಾಡಬೇಕು ಎಂದು ಮಾತ್ರ ಹೇಳಿರುತ್ತದೆ, ಕಮ್ಮಿ ದರಲ್ಲಿ ಊಟದ ವ್ಯವಸ್ಥೆ ಮಾಡಬೇಕು ಎಂದು ಹೇಳಿರುವುದಿಲ್ಲ ಆದುದರಿಂದ ನಮ್ಮ ಬೇಡಿಕೆ ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ . COD Demand No. 20 ರಲ್ಲಿ ಆಯುಧ ಪೂಜೆ ಉಡುಗೊರೆಯನ್ನು ಯೂನಿಯನ್ ನು ಕೇಳಿ ಕೊಡಬೇಕು ಎಂದು ಬೇಡಿಕೆಯನ್ನು ಇಟ್ಟಿರುತ್ತೇವೆ ಎಂದರೆ ಸರಿ . ಉಡುಗೊರೆಯನ್ನು ನೀಡುವುದು ಆಡಳಿತ ವರ್ಗದವರ ವಿವೇಚನೆಗೆ ಬಿಟ್ಟಿದ್ದಾಗಿದ್ದರಿಂದ ಸದರಿ ಬೇಡಿಕೆಯು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ . COD Demand No. 21 ರಲ್ಲಿ ಕೇಳಿದಂತಹ Casual leave ಈಗಾಗಲೇ ಆಡಳಿತ ವರ್ಗದವರು ನೀಡುತ್ತಿದ್ದಾರೆ ಎಂದರೆ ಸರಿಯಲ್ಲ . ಸದರಿ ಬೇಡಿಕೆಯು ಕಾನೂನು ಬಾಹಿರವಾಗಿರುತ್ತದೆ ಎಂದರೆ ಸರಿಯಲ್ಲ .

COD ಯಲ್ಲಿರುವಂತಹ 21 ಬೇಡಿಕೆಗಳನ್ನು ನೀಡುವ ಮೊದಲು 2 ನೇ ಪಾರ್ಟಿ ಸಂಸ್ಥೆಯ ಆರ್ಥಿಕ ಸ್ಥಿತಿಯನ್ನು ಗಣನೆಗೆ ತೆಗೆದುಕೊಂಡಿರುತ್ತೇವೆ. 2 ನೇ ಪಾರ್ಟಿ ಸಂಸ್ಥೆಯ ಉತ್ಪಾದನೆ ಹೆಚ್ಚಾಗಿದ್ದು, ಬಾಡಿಗೆ ಜಾಗದಿಂದ ಸ್ವಂತ ಜಾಗಕ್ಕೆ ಕಾರ್ಖಾನೆಯನ್ನು ಸ್ಥಳಾಂತರಿಸಿದ್ದು, ಹಾಗೂ ಆಡಳಿತ ವರ್ಗ ಸಿಬ್ಬಂದಿ ವೇತನ ಕಾರ್ಮಿಕ ವರ್ಗದವರ ವೇತನಕ್ಕಿಂತ 8% ರಿಂದ 10 % ಜಾಸ್ತಿ ಇದ್ದುದರಿಂದ ನಮ್ಮ ಬೇಡಿಕೆಗಳನ್ನು ಇಟ್ಟಿರುತ್ತೇವೆ. ಬೇಡಿಕೆಯನ್ನು ಇಡುವ ಕಾಲಕ್ಕೆ 2 ನೇ ಪಾರ್ಟಿ ಸಂಸ್ಥೆಯ ಆದಾಯ, ವೆಚ್ಚ ಮತ್ತು ಸಾಲದ ಹೊರೆಯ ಬಗ್ಗೆ ನನಗೆ ಅಂದಾಜಿನಲ್ಲಿ ಮಾಹಿತಿ ಇತ್ತು. ಗೂಗಲ್ ನಲ್ಲಿ 2 ನೇ ಪಾರ್ಟಿ ಸಂಸ್ಥೆಯ ಬಗ್ಗೆ ಬಂದಂತಹ ಮಾಹಿತಿ ಮತ್ತು ಸಂಸ್ಥೆಯ ಡೈರೆಕ್ಟರ್ ರವರು ವಹಿವಾಟಿನ ಆಧಾರದ ಮೇರೆಗೆ ನನಗೆ 2 ನೇ ಪಾರ್ಟಿ ಸಂಸ್ಥೆಯ ಆರ್ಥಿಕ ಸ್ಥಿತಿಯ ಬಗ್ಗೆ ಅರಿವು ಇತ್ತು. ನಿರ್ದಿಷ್ಟ ದಾಖಲಾತಿಗಳ ಆಧಾರದ ಮೇರೆಗೆ ನನಗೆ ಮಾಹಿತಿ ಇರಲಿಲ್ಲ ಎಂದರೆ ಸರಿ .

ಕೂರ್ಗಳ್ಳಿ ಕೈಗಾರಿಕಾ ಪ್ರದೇಶದ ಅಕ್ಕಪಕ್ಕದ ಪ್ರದೇಶಗಳಾದ ಹೆಬ್ಬಾಳ್ ಮತ್ತು ಬೆಳಗೊಳದಲ್ಲಿ Kaynes ಮತ್ತು Cyint ಸಂಸ್ಥೆಗಳು Circuit board ಮೇಲೆ Assembly ಮಾಡುವ ಕೆಲಸವನ್ನು ಮಾಡುತ್ತಾರೆ . ಸದರಿ ಸಂಸ್ಥೆಗಳ ಆರ್ಥಿಕ ಪರಿಸ್ಥಿತಿಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ, ಆದರೆ ಕೆಲಸಗಾರರ ಸಂಬಳದ ಬಗ್ಗೆ ಮಾಹಿತಿ ಇರುತ್ತದೆ . ಸದರಿ ಮಾಹಿತಿಯನ್ನು ನಾನು ಈ ನ್ಯಾಯಾಧೀಕರಣ ದ ಮುಂದೆ ಹಾಜರು ಪಡಿಸಿರುವುದಿಲ್ಲ. ಸದರಿ ಮಾಹಿತಿಯು ಬೇರೆ ಸಂಸ್ಥೆಗೆ ಸಬಂಬಧಿಸಿದರಿಂದ ಅದನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಲು ಆಗುವುದಿಲ್ಲ. ಆದುದರಿಂದ ಸದರಿ ಸಂಸ್ಥೆಯ ಕೆಲಸಗಾರರ ಸಂಬಳದ ಬಗ್ಗೆ ನನಗೆ ಸರಿಯಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ . COD ಪ್ರಕಾರ ಬೇಡಿಕೆಗಳನ್ನು ಈಡೇರಿಸಿದ್ದಲ್ಲಿ ಸಂಸ್ಥೆಗೆ ತಿಂಗಳಿಗೆ ಲಕ್ಷಾಂತರ ರೂಪಾಯಿ ವೆಚ್ಚವಾಗುತ್ತದೆ ಎಂದರೆ ಸರಿ . ಬೇಡಿಕೆಗಳು 2017 ರಲ್ಲಿ ಮಾಡಿದ್ದರಿಂದ ಅದನ್ನು ಈಡೇರಿಸಿದ್ದಲ್ಲಿ ಮುಂದಿನ ವರ್ಷಗಳಿಗೂ ಅದು ಅನ್ವಯವಾಗುತ್ತದೆ ಮತ್ತು ಇದರಿಂದಾಗಿ ಸಂಸ್ಥೆಗೆ ಹೆಚ್ಚಿನ ಆರ್ಥಿಕ ಹೊರೆ ಬೀಳುತ್ತದೆ ಎಂದರೆ ಸರಿಯಲ್ಲ.

COD ಕೇಳಿದಂತಹ ಬೇಡಿಕೆಗಳು ಕಾನೂನುಬಾಹಿರವಾಗಿರುವುದರಿಂದ ಅವುಗಳನ್ನು ಈಡೇರಿಸಲು 2 ನೇ ಪಾರ್ಟಿ ಸಂಸ್ಥೆಯು ಭಾಧ್ಯಸ್ಥವಾಗಿರುವುದಿಲ್ಲ ಎಂದರೆ ಸರಿಯಲ್ಲ . COD ಯನ್ನು ಸಲ್ಲಿಸಿದ ಕಾಲಕ್ಕೆ ಇದ್ದಂತಹ ಕೆಲಸಗಾರರು ಈಗ 2 ನೇ ಪಾರ್ಟಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸರಿ . ಸಾಕ್ಷಿಯು ಮುಂದುವರೆದು 2 ನೇ ಪಾರ್ಟಿ ಸಂಸ್ಥೆಯು ಕಾನೂನುಬಾಹಿರವಾಗಿ ಕೆಲವೊಂದು ಕೆಲಸಗಾರರನ್ನು ತೆಗೆದು ಹಾಕಿರುತ್ತಾರೆ ಎಂದು ನುಡಿಯುತ್ತಾರೆ . ನಾವು ಮಾಡಿದ ದುರ್ನಡತೆಯಿಂದಾಗ 2 ನೇ ಪಾರ್ಟಿ ಸಂಸ್ಥೆಯು ಕೆಲಸಗಾರರನ್ನು ಕೆಲಸದಿಂದ ತೆಗೆದು ಹಾಕಿದ್ದರಿಂದ ಅದು ಕಾನೂನುಬದ್ದವಾಗಿರುತ್ತದೆ ಎಂದರೆ ಸರಿಯಲ್ಲ . COD ಯಲ್ಲಿ ಕೇಳಿದಂತಹ ಯಾವುದೇ ಬೇಡಿಕೆಯನ್ನು ಪರಿಗಣಿಸಲಾಗುವುದಿಲ್ಲ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.